**BEd MC 06/07 (03)**

# B.Ed. Degree Examination, October 2015
## (D.E. Scheme)
## Content Cum Methodology of Teaching Sanskrit
## ಸಂಸ್ಕೃತ ವಿಷಯಾಧಾರಿತ ಬೋಧನಾ ವಿಧಾನಶಾಸ್ತ್ರ

Time : 3 Hours Max. Marks : 100

***ಸೂಚನೆ:* ಎಲ್ಲಾ ವಿಭಾಗಗಳೂ ಕಡ್ಡಾಯ.**

### ವಿಭಾಗ – ಎ

ಈ ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿರಿ. ನಿಮ್ಮ ಉತ್ತರ **ತಲಾ ಮೂರು ಪುಟ** ಮೀರದಂತಿರಲಿ.

**(4×10=40)**

1. ವಿವಿಧ ಜ್ಞಾನಕ್ಷೇತ್ರಗಳಿಗೆ ಸಂಸ್ಕೃತ ಭಾಷೆಯ ಕೊಡುಗೆಯನ್ನು ವಿಶದೀಕರಿಸಿರಿ.
2. ಒಂದು ಸಂಸ್ಕೃತ ಘಟಕದ ಉದಾಹರಣೆಯೊಂದಿಗೆ 'ಸಾಮಾಜಿಕ ವಿಮರ್ಶೆ'ಯ ವ್ಯಾಖ್ಯೆಯನ್ನು ಸ್ಪಷ್ಟೀಕರಿಸಿರಿ.
3. ಬೋಧನೋದ್ದೇಶದ ವರ್ಗೀಕರಣದ ಮೂರು ವಲಯಗಳನ್ನು ವಿವರಿಸಿರಿ.
4. 'ಸಂಸ್ಕೃತ ಗದ್ಯ ಬೋಧನೆಗೆ ಖಂಡ ವಿಧಾನವು ಸೂಕ್ತ' ಎಂಬುದನ್ನು ಒಂದು ಸಂಸ್ಕೃತ ಘಟಕದ ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿರಿ.
5. ಸಂಸ್ಕೃತ ಭಾಷಾ ಮೌಲ್ಯಮಾಪನದಲ್ಲಿ ಘಟಕ ಪರೀಕ್ಷೆಯ ಮಹತ್ವವನ್ನು ವಿವರಿಸಿರಿ.
6. ಶಿಕ್ಷಣ ಇಲಾಖೆಯ ಭಾಷಾಬೋಧನೆಯ ಉದ್ದೇಶ ಸಾಧನೆಗಾಗಿ ಹಮ್ಮಿಕೊಂಡ ಅನೌಪಚಾರಿಕ ಚಟುವಟಿಕೆಗಳನ್ನು ವಿವರಿಸಿರಿ.

### ವಿಭಾಗ – ಬಿ

ಈ ಕೆಳಗಿನ ಯಾವುದಾದರೂ **ಆರು** ಪ್ರಶ್ನೆಗಳಿಗೆ ಉತ್ತರಿಸಿರಿ. ನಿಮ್ಮ ಉತ್ತರ **ತಲಾ ಒಂದು ಪುಟ** ಮೀರದಂತಿರಲಿ.

**(6×5=30)**

7. a) ಸಂಸ್ಕೃತ ವ್ಯಾಕರಣ ಬೋಧನೆಯಲ್ಲಿ ಸಂಸ್ಕೃತ ಭಾಷಾ ಆಟಗಳ ಮಹತ್ವವನ್ನು ವಿವರಿಸಿರಿ.

   b) ತ್ರಿಭಾಷಾ ಸೂತ್ರದ ಹಿನ್ನೆಲೆಯಲ್ಲಿ ಸಂಸ್ಕೃತದ ಸ್ಥಾನಮಾನವನ್ನು ವಿವರಿಸಿರಿ.

   c) ಸಂಸ್ಕೃತ ಕಾವ್ಯ ಬೋಧನೆಯ ಉದ್ದೇಶಗಳನ್ನು ಸ್ಪಷ್ಟಪಡಿಸಿರಿ.

d) ಸಂಸ್ಕೃತ ಭಾಷಾ ಕಲಿಕೆಯ ತತ್ವಗಳು ಯಾವುವು ? ವಿವರಿಸಿರಿ.

e) 'ಪಾಠ ಯೋಜನೆ' ಎಂದರೇನು ? ಅದರ ಪ್ರಾಮುಖ್ಯತೆಯನ್ನು ವಿವರಿಸಿರಿ.

f) ಸಂಸ್ಕೃತ ವಾಙ್ಮಯದಲ್ಲಿ 'ವೈದಿಕ ಸಾಹಿತ್ಯ'ದ ಸ್ಥಾನವನ್ನು ವಿಶ್ಲೇಷಿಸಿರಿ.

g) 'ಸಂಸ್ಕೃತ ಭಾಷಾ ಶಿಕ್ಷಕರಿಗೆ ಮನೋವಿಜ್ಞಾನದ ಜ್ಞಾನವು ಅನಿವಾರ್ಯ' ಈ ಹೇಳಿಕೆಯನ್ನು ವಿಮರ್ಶಿಸಿರಿ.

h) 'ಬರವಣಿಗೆ ಒಂದು ಸಂಕೀರ್ಣವಾದ ಅಭಿವ್ಯಕ್ತಿ ಕೌಶಲ' – ಚರ್ಚಿಸಿರಿ.

### ವಿಭಾಗ – ಸಿ

ಈ ಕೆಳಗಿನ ಯಾವುದಾದರೂ **ಆರು** ಪ್ರಶ್ನೆಗಳಿಗೆ ಉತ್ತರಿಸಿರಿ : **(6×5=30)**

8. a) ಸಂಸ್ಕೃತದ ಕರ್ಮಧಾರಯ ಸಮಾಸವನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

b) ಉತ್ಪ್ರೇಕ್ಷಾಲಂಕಾರದ ಲಕ್ಷಣವನ್ನು ಸೂಕ್ತ ಉದಾಹರಣೆಯೊಂದಿಗೆ ವಿವರಿಸಿರಿ.

c) ಸಂಸ್ಕೃತದಲ್ಲಿ ಪ್ರಯೋಗ ಪರಿವರ್ತನೆಯನ್ನು ಬೋಧಿಸುವಾಗ ಪರಿಗಣಿಸಬೇಕಾದ ಅಂಶಗಳನ್ನು ತಿಳಿಸಿರಿ.

d) 'कवि' ಶಬ್ದವನ್ನು ಲಿಂಗ ವಿಭಕ್ತಿ ವಚನಗಳೊಂದಿಗೆ ಎಲ್ಲ ರೂಪಗಳನ್ನು ಬರೆಯಿರಿ.

e) ಸಂಸ್ಕೃತದಲ್ಲಿ सति सप्तमि ಯ ಮಹತ್ವವನ್ನು ಉದಾಹರಣೆ ಸಹಿತ ವಿವರಿಸಿರಿ.

f) ಸಂಸ್ಕೃತ ಭಾಷಾ ತರಗತಿಯಲ್ಲಿ 'लट् लकार'ವನ್ನು ಹೇಗೆ ಬೋಧಿಸುವಿರಿ ?

g) 'विद्या ददाति विनयं' ಈ ಶ್ಲೋಕದ ಛಂದಸ್ಸನ್ನು ಸಲಕ್ಷಣವಾಗಿ ವಿವರಿಸಿರಿ.

h) ಸಂಸ್ಕೃತ ಬೋಧನೆಯಲ್ಲಿ सन्नन्त ಗಳನ್ನು ಹೇಗೆ ಬೋಧಿಸುವಿರಿ ? ಸ್ಪಷ್ಟಪಡಿಸಿರಿ.

---